**ದಿ: 19-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಚಿದಾನಂದ ರಾವ್ ಪಿ. ರವರಿಂದ**

ನಾನು ಪಿ.ಯು.ಸಿಯವರಿಗೆ ವಿದ್ಯಾಭ್ಯಾಸ ಮಾಡಿದ್ದು, ವ್ಯವಸಾಯ ಮಾಡುತ್ತಿದ್ದೇನೆ. ನಾನು ಬೈಂದೂರು ತಾಲೂಕಿನ ಕೆರ್ಗಾಲು ಗ್ರಾಮದಲ್ಲಿ ವಾಸಮಾಡುತ್ತಿದ್ದೇನೆ. ನಾನು ಬಿಲ್ಲವ ಸಮುದಾಯಕ್ಕೆ ಸೇರಿದ್ದೇನೆ ಎಂದರೆ ಸರಿ. ನಾನು ಸಾಕ್ಷಿಯನ್ನು ನನ್ನ ಹಾಗೂ ನನ್ನ ಚಿಕ್ಕಮ್ಮನಾದ ಮಗಳಾದ 35ನೇ ಪ್ರತಿವಾದಿ ಪಾರ್ವತಿ ಪೂಜಾರ್ತಿಯ ಪರವಾಗಿ ಹೇಳುತ್ತಿದ್ದೇನೆ. ನನ್ನ ತಾಯಿಯ ಹೆಸರು ಶೇಷಿ ಪೂಜಾರ್ತಿ. ಶೇಷಿ ಪೂಜಾರ್ತಿಗೆ ಏಳು ಜನ ಮಕ್ಕಳು. ಅವರ ಹೆಸರು 1) ರಾಮ, 2) ನಾರಾಯಣ, 3) ನಾಗ, 4)ಅಕ್ಕಮ್ಮ, 5) ಸೂರ 6) ಪರಮೇಶ್ವರ ಮತ್ತು 7) ರಾಮಕೃಷ್ಣ. 7ನೇ ಪ್ರತಿವಾದಿ ರಾಮನ ಹೆಂಡತಿ ಮತ್ತು 8 ಮತ್ತು 9ನೇ ಪ್ರತಿವಾದಿಗಳು ರಾಮನ ಮಕ್ಕಳು. 15 ರಿಂದ 21ನೇ ಪ್ರತಿವಾದಿಗಳು 14ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. 10 ರಿಂದ 14ನೇ ಪ್ರತಿವಾದಿಗಳು ಶೇಷಿ ಪೂಜಾರ್ತಿಯ ಮಕ್ಕಳು ಎಂದರೆ ಸರಿ.

**2)** ಶೇಷಿಯ ತಾಯಿಯ ಹೆಸರು ಮಂಜಿ. ಮಂಜಿಗೆ 5 ಜನ ಮಕ್ಕಳು, ಅವರ ಹೆಸರು 1) ಚಿಕ್ಕ, 2) ಶೇಷಿ, 3) ಶಿವಮ್ಮ, 4) ಚಿಕ್ಕಮ್ಮ ಮತ್ತು 5) ಮಂಜು. 1 ಮತ್ತು 2ನೇ ಪ್ರತಿವಾದಿಗಳು ಚಿಕ್ಕ ಪೂಜಾರಿಯ ಮಕ್ಕಳು. 1ನೇ ವಾದಿ, 23, 24ನೇ ಪ್ರತಿವಾದಿಗಳು ಚಿಕ್ಕಮ್ಮನ ಮಕ್ಕಳು.

**3)** ನಾನು 2 ಮತ್ತು 17ನೇ ದಾವಾ ಆಸ್ತಿಗಳಲ್ಲಿನ ಪೂರ್ತಿ ವಿಸ್ತೀರ್ಣ ಹಾಗೂ 1ನೇ ದಾವಾ ಆಸ್ತಿಯಲ್ಲಿನ 00-55 ಸೆಂಟ್ಸ್ ನ್ನು 1 ಮತ್ತು 2ನೇ ಪ್ರತಿವಾದಿಗಳಿಂದ 3 ಕ್ರಯ ಪತ್ರಗಳ ಅಡಿಯಲ್ಲಿ ಕ್ರಯ ಮಾಡಿರುತ್ತೇನೆ. 35ನೇ ಪ್ರತಿವಾದಿಯಾದ ಶ್ರೀಮತಿ ಪಾರ್ವತಿ ಪೂಜಾರ್ತಿಯು 1ನೇ ದಾವಾ ಆಸ್ತಿಯಲ್ಲಿನ 00-40 ಸೆಂಟ್ಸ್, 5, 6, 9 ಮತ್ತು 18ನೇ ದಾವಾ ಆಸ್ತಿಗಳನ್ನು 1 ಮತ್ತು 2ನೇ ಪ್ರತಿವಾದಿಗಳಿಂದ ಕ್ರಯ ಪತ್ರ ಅಡಿಯಲ್ಲಿ ಖರೀದಿ ಮಾಡಿರುತ್ತಾಳೆ. ನಾನು ಮತ್ತು 35ನೇ ಪ್ರತಿವಾದಿ ಖರೀದಿ ಮಾಡಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಭೂನ್ಯಾಯ ಮಂಡಳಿಯು ಗೇಣಿ ಹಕ್ಕುಗಳಿಗೆ ಸಂಬಂಧಿಸಿ ಆದೇಶ ಮಾಡಿದೆ ಮತ್ತು ಸದರಿ ಆದೇಶದ ಸಂಖ್ಯೆ ಕ್ರಯ ಪತ್ರಗಳಲ್ಲಿ ಉಲ್ಲೇಖವಾಗಿದೆ ಎಂದರೆ ಸರಿ. ಸದರಿ ಆಸ್ತಿಗಳ ಮೇಲಿನ ಗೇಣಿ ಹಕ್ಕುಗಳನ್ನು ಕೋರಿ ಚಿಕ್ಕ ಪೂಜಾರಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಚಿಕ್ಕ ಪೂಜಾರಿ ಸಲ್ಲಿಸಿದ್ದ ಅರ್ಜಿಯ ಮೇರೆಗೆ ಭೂನ್ಯಾಯ ಮಂಡಳಿಯು ಸದರಿ ಆಸ್ತಿಗಳಿಗೆ ಸಂಬಂಧಿಸಿದ ಗೇಣಿ ಹಕ್ಕನ್ನು ಆತನ ಹೆಸರಿನಲ್ಲಿ ಮಂಜೂರು ಮಾಡಿ ನಮೂನೆ ಸಂಖ್ಯೆ 10ನ್ನು ನೀಡಿದೆ ಎಂದರೆ ಸರಿ.

**4)** ನಮೂನೆ ಸಂಖ್ಯೆ 7ರಲ್ಲಿ ನಮೂದಿಸಿರುವ ಕುಷ್ಟು ಎನ್ನುವ ವ್ಯಕ್ತಿಯು ಸದರಿ ಚಿಕ್ಕ ಪೂಜಾರಿಯ ಅಳಿಯ ಎಂದರೆ ತಂಗಿಯ ಮಗನಾಗಿದ್ದು, ಆತ ಮರಣ ಹೊಂದಿರುತ್ತಾನೆ. ದಾವಾ ಜಮೀನುಗಳು ಮೂಲತಃ ಚಿಕ್ಕ ಪೂಜಾರಿಯ ಪೂರ್ವಜರಿಗೆ ಸೇರಿದ್ದವು ಎಂದರೆ ಸರಿ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪೂರ್ವಜರು ಚಿಕ್ಕ ಪೂಜಾರಿಗೆ ಸೋಡಾಚೀಟಿಯನ್ನು ನೀಡಿದ್ದರು. ಸದರಿ ಸೋಡಾಚೀಟಿಯನ್ನು ನಾನು ನೋಡಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಚಿಕ್ಕ ಪೂಜಾರಿ ಪರವಾಗಿ ಸೋಡಾಚೀಟಿಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಚಿಕ್ಕ ಪೂಜಾರಿಯ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಚಿಕ್ಕ ಪೂಜಾರಿಯ ಸ್ವಂತ ಆಸ್ತಿಗಳು ಎಂದು ತೋರಿಸಲು ಭೂನ್ಯಾಯ ಮಂಡಳಿಯ ಮಂಜೂರಾತಿ ಆದೇಶ ಬಿಟ್ಟು ಬೇರೆ ದಾಖಲೆಗಳು ಇಲ್ಲ.

**5)** ಚಿಕ್ಕ ಪೂಜಾರಿ ಯಾವುದೇ ಮರಣಶಾಸನ ಬರೆದಿರುವುದಿಲ್ಲ, ಆದರೆ 1ನೇ ವಾದಿ ಚಿಕ್ಕ ಪೂಜಾರಿಯ ಹೆಸರಿನಲ್ಲಿ ಮರಣ ಶಾಸನವನ್ನು ಸೃಷ್ಟಿಸಿರುತ್ತಾರೆ. ದಾವಾ ಆಸ್ತಿಗಳನ್ನು ಮಾರಾಟ ಮಾಡಲು 1 ಮತ್ತು 2ನೇ ಪ್ರತಿವಾದಿಗಳಿಗೆ ಸಂಪೂರ್ಣ ಹಕ್ಕು ಮತ್ತು ಹಿತಾಸಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು 37 ಹಿಸ್ಸೆಗಳಾಗಬೇಕಾದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗಳಿಗೆ ಇರುವ ಹಿಸ್ಸೆಗಳನ್ನು ಎತ್ತಿಹಾಕಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**